# ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ:ಸಿ5[1]ಬೋ.ನೌ.ವರ್ಗ:10:2011-12 ದಿನಾಂಕ:09ನೇ ಮೇ 2011

## : ಸುತ್ತೋಲೆ :

**ವಿಷಯ**: 2011-12ನೇ ಸಾಲಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಬೋಧಕೇತರ ಅಧಿಕಾರಿ / ನೌಕರರ ವರ್ಗಾವಣೆ ಬಗ್ಗೆ.

**ಉಲ್ಲೇಖ**: ಸರ್ಕಾರದ ಆದೇಶ ಸಂಖ್ಯೆ:ಡಿಪಿಎಆರ್:04:ಎಸ್‌ಟಿಆರ್:2001, ದಿ:22.11.2001.
2] ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ:12:ಸೇನೌವ:2001, ದಿನಾಂಕ:27.04.2011.

2011-12ನೇ ಸಾಲಿನಲ್ಲಿ ನಿರ್ವಹಿಸುವ ಸರ್ಕಾರಿ ನೌಕರರ ವರ್ಗಾವಣೆಗಳ ಬಗ್ಗೆ ಮಾರ್ಗಸೂಚಿಯನ್ನು ಉಲ್ಲೇಖ [1] ಮತ್ತು [2]ರಲ್ಲಿ ಸ್ಪಷ್ಟ ಪಡಿಸಿದೆ. ಅದರನ್ವಯ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿನ ಬೋಧಕೇತರ ಅಧಿಕಾರಿ / ನೌಕರರ ವರ್ಗಾವಣೆಗಳನ್ನು ಅನುಷ್ಠಾನಗೊಳಿಸಲು ರಾಜ್ಯದ ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳು ಅವರವರ ಕಾರ್ಯವ್ಯಾಪ್ತಿಗೆ ಬರುವಂತಹ ವರ್ಗಾವಣೆ ವೃಂದ ನಿರ್ವಹಣಾ ಪ್ರಾಧಿಕಾರ ಕ್ರಮವಹಿಸಬೇಕಾಗಿದೆ. [ಸರ್ಕಾರದ ಆದೇಶದ ಪ್ರತಿಗಳನ್ನು ಲಗತ್ತಿಸಿದೆ]

ಈ ಹಿನ್ನೆಲೆಯಲ್ಲಿ ಇಲಾಖೆಯು ಈ ಕೆಳಕಂಡಂತೆ ಕೆಲವು ಅಂಶಗಳ ಬಗ್ಗೆ ಸಂಬಂಧಪಟ್ಟಂತಹ ಅಧಿಕಾರಿಗಳ ಗಮನಕ್ಕೆ ತರಲಾಗಿದೆ.

*01.* ಸಾರ್ವಜನಿಕ ಶಿಕ್ಷಣ ಇಲಾಖೆಯ ಬೋಧಕೇತರ ಪತ್ರಾಂಕಿತ ಅಧಿಕಾರಿಗಳ ವರ್ಗಾವಣೆಗಳನ್ನು ಅನುಷ್ಠಾನಗೊಳಿಸಲು ರಾಜ್ಯ ಮಟ್ಟದ ವೃಂದ ಮತ್ತು ನಿರ್ವಹಣಾ ಪ್ರಾಧಿಕಾರ ಕ್ರಮವಹಿಸಬೇಕಾಗಿದೆ. ಈ ಕಾರಣ ಆಯಾ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವಂತಹ ಬೋಧಕೇತರ ಪತ್ರಾಂಕಿತ ಅಧಿಕಾರಿಗಳ ವರ್ಗಾವಣೆ ಅರ್ಜಿಗಳನ್ನು ಆಯಾ ಜಿಲ್ಲಾ ಉಪ ನಿರ್ದೇಶಕರ ಕಛೇರಿಗೆ ಸಲ್ಲಿಕೆಯಾದ ಅರ್ಜಿಗಳನ್ನು ಲಭ್ಯವಿರುವ ದಾಖಲೆಗಳೊಂದಿಗೆ ಪರಿಶೀಲಿಸಿ, ಈ ಕಛೇರಿಗೆ ಕಳುಹಿಸಲು ತಿಳಿಸಿದೆ.

*02.* ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರು [ಶೈಕ್ಷಣಿಕ ಜಿಲ್ಲೆಗಳು ಸೇರಿದಂತೆ] ತಮ್ಮ ಕಾರ್ಯವ್ಯಾಪ್ತಿಗೆ ಬರುವಂತಹ ಜಿಲ್ಲೆಯೊಳಗಿನ "ಸಿ" ಮತ್ತು "ಡಿ" ದರ್ಜೆ ನೌಕರರುಗಳ ವರ್ಗಾವಣೆಗಳನ್ನು ಜಾರಿಗೊಳಿಸುವ ಸಂಬಂಧ ಪ್ರಸ್ತಾವನೆಯನ್ನು ಆಯಾ ವರ್ಗಾವಣೆ ವೃಂದ ನಿರ್ವಹಣಾ ಪ್ರಾಧಿಕಾರದ ಮುಂದೆ ಕರಾರುವಕ್ಕಾಗಿ ಮಂಡಿಸಿ ಮುಂದಿನ ಕ್ರಮವಹಿಸಲು ತಿಳಿಸಿದೆ. ***ಈ ಹಿನ್ನೆಲೆಯಲ್ಲಿ ಆಯಾ ಜಿಲ್ಲೆಯೊಳಗಿನ ವರ್ಗಾವಣೆ ಅರ್ಜಿಗಳನ್ನು ಈ ಕಛೇರಿಗೆ ಯಾವುದೇ ಕಾರಣಕ್ಕೂ ಕಳುಹಿಸಬಾರದಾಗಿ ತಿಳಿಸಿದೆ.***

*03.* ಜಿಲ್ಲೆಯೊಳಗೆ / ಅಂತರ ಜಿಲ್ಲೆ ಹಾಗೂ ಅಂತರ ಆಯುಕ್ತಾಲಯ ವರ್ಗಾವಣೆಗಳೂ ಸೇರಿದಂತೆ ಜಿಲ್ಲೆಯಲ್ಲಿನ ಕಾರ್ಯನಿರತ ವೃಂದ ಬಲದ ಶೇಕಡಾ 4.5ರಷ್ಟನ್ನು ಮೀರದಂತೆ ಕಟ್ಟುನಿಟ್ಟಾಗಿ ನಿಯಮದ ವ್ಯಾಪ್ತಿಯೊಳಗೆ ವರ್ಗಾವಣೆಗಳನ್ನು ಅನುಷ್ಠಾನಗೊಳಿಸಲು ತಿಳಿಸಿದೆ.

*04.* ಈ ಕಛೇರಿಯಲ್ಲಿ, ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಗೆ ಬರುವಂತಹ ಶೈಕ್ಷಣಿಕ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ "ಸಿ" ಮತ್ತು "ಡಿ" ದರ್ಜೆ ನೌಕರರ ಅಂತರ ಜಿಲ್ಲೆ/ಅಂತರ ಆಯುಕ್ತಾಲಯ ವ್ಯಾಪ್ತಿಗಳೊಪಟ್ಟ ವರ್ಗಾವಣೆಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು. ಈ ಕಾರಣ ಆಯಾ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವಂತಹ ಅಂತರ ಜಿಲ್ಲಾ/ಅಂತರ ಆಯುಕ್ತಾಲಯ ವರ್ಗಾವಣೆ ಅರ್ಜಿಗಳನ್ನು ಮಾತ್ರ ಕ್ರಮಬದ್ಧವಾಗಿ ನೌಕರರ ಸೇವಾ ವಿವರಗಳನ್ನ ಕಛೇರಿಯಲ್ಲಿ ಲಭ್ಯವಿರುವ ದಾಖಲೆಗಳೊಂದಿಗೆ ಪರಿಶೀಲಿಸಿ, ಯಾವುದೇ ಲೋಪಗಳಿಗೆ ಅವಕಾಶ ನೀಡದೆ, ಒಂದೇ ಬಾರಿಗೆ ಪ್ರಸ್ತಾವನೆಗಳನ್ನು ಕಳುಹಿಸಿಕೊಡಲು ತಿಳಿಸಿದೆ.

*05.* ವರ್ಗಾವಣೆ ಅನುಷ್ಠಾನಗೊಳಿಸಲು ಕಾಲಾವಧಿ ಕಡಿಮೆ ಇರುವುದರಿಂದ ಅಂತರ ಜಿಲ್ಲೆ/ಅಂತರ ಆಯುಕ್ತಾಲಯ ವರ್ಗಾವಣೆ ಬಯಸುವ ಎಲ್ಲಾ ಕಛೇರಿಯ "ಬಿ", "ಸಿ" ಮತ್ತು "ಡಿ" ಅಧಿಕಾರಿ / ನೌಕರರುಗಳು ವರ್ಗಾವಣೆ ಅರ್ಜಿಗಳನ್ನು ಕಾರ್ಯನಿರ್ವಹಿಸುತ್ತಿರುವ ಕಛೇರಿ ಮುಖ್ಯಸ್ಥರ ಮೂಲಕ ಸೇವಾ ವಿರಗಳನ್ನು ದೃಢೀಕರಿಸಿ ಈ ಕಛೇರಿಗೆ ನೇರವಾಗಿ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ಸಹ ಪರಿಗಣಿಸಲಾಗುವುದು. ಕಛೇರಿ ಮುಖ್ಯಸ್ಥರುಗಳು ಕಛೇರಿಯ ಸೂಚಾನಾ ಫಲಕಗಳಲ್ಲಿ ಪ್ರಕಟಿಸಿ ಪ್ರಚುರ ಪಡಿಸುವುದು

*06.* ಎಲ್ಲಾ ವರ್ಗಾವಣೆಗಳು ಉಲ್ಲೇಖ [1] ಮತ್ತು [2]ರಲ್ಲಿನ ಮಾರ್ಗಸೂಚಿಯಲ್ಲಿನ ನಿಯಮಗಳಿಗೆ ಬದ್ಧವಾಗಿರತಕ್ಕದ್ದು.

*07.* ವರ್ಗಾವಣೆ ಕೋರಿ ಸಲ್ಲಿಸುವ ಅರ್ಜಿಯನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ನಿಗದಿತ ನಮೂನೆಯಲ್ಲಿಯೇ ಭರ್ತಿ ಮಾಡಿ ಶಿಫಾರಸ್ಸು ಮತ್ತು ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸತಕ್ಕದ್ದು.

*08.* ಈ ಎಲ್ಲಾ ಮೇಲ್ಕಂಡ ಬೋಧಕೇತರ ವರ್ಗದ ಅಧಿಕಾರಿಗಳ ವರ್ಗಾವಣೆ ಅರ್ಜಿಗಳನ್ನು ಹಾಗೂ "ಸಿ" ಮತ್ತು "ಡಿ" ದರ್ಜೆ ನೌಕರರ ಅಂತರ ಜಿಲ್ಲೆ / ಅಂತರ ಆಯುಕ್ತಾಲಯದ ಅರ್ಜಿಗಳನ್ನು ಅವರ ಸೇವಾ ವಹಿಗಳು/ಲಭ್ಯವಿರುವ ದಾಖಲೆಗಳೊಂದಿಗೆ ಪರಿಶೀಲಿಸಿ ಸಹ. ***ಈ ಕಛೇರಿಗೆ ದಿನಾಂಕ:20.05.2011ರ ಒಳಗಾಗಿ ಶ್ರೀ ಎನ್.ಸತ್ಯನಾರಾಯಣ, ಸಹಾಯಕ ನಿರ್ದೇಶಕರು [ಆಡಳಿತ], ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-560001,*** ಇವರ ವಿಳಾಸಕ್ಕೆ ಕಳುಹಿಸಲು ತಿಳಿಸಿದೆ. ನೇರವಾಗಿ ವರ್ಗಾವಣೆ ಅರ್ಜಿ ಸಲ್ಲಿಸಬಯಸುವ ನೌಕರರುಗಳೂ ಇದೇ ಅವಧಿಯ ಒಳಗೆ ಕಛೇರಿ ಮುಖ್ಯಸ್ಥರ ದೃಢೀಕರಣದೊಂದಿಗೆ ಸಲ್ಲಿಸುವುದು. ಕಛೇರಿ ಮುಖ್ಯಸ್ಥರುಗಳಿಂದ ದೃಢೀಕರಿಸದೆ ಇರುವ ವರ್ಗಾವಣೆ ಮನವಿಗಳನ್ನು ಹಾಗೂ ವಿಳಂಬವಾಗಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

*[ಎನ್.ಬಿ.ಪಾಟೀಲ್]*

*ಜಂಟಿ ನಿರ್ದೇಶಕರು [ಆಡಳಿತ] [ಹೆ.ಪ್ರ]*

*ಆಯುಕ್ತರ ಪರವಾಗಿ.*

**ಇವರಿಗೆ:**

*01.* ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ ಇವರಿಗೆ ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.

*02.* ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹ ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮೈಸೂರು ವಿಭಾಗೀಯ ಕಛೇರಿ, ಮೈಸೂರು ಜಿಲ್ಲೆ.

*03.* ಪ್ರಾಂಶುಪಾಲರು, ಸಿ.ಟಿ.ಇ., ಮೈಸೂರು, ಮಂಗಳೂರು ಮತ್ತು ಚಿತ್ರದುರ್ಗ.

*04.* ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಮತ್ತು ಮೈಸೂರು ವಿಭಾಗಗಳಲ್ಲಿನ ಎಲ್ಲಾ ಉಪ ನಿರ್ದೇಶಕರು [ಆಡಳಿತ], ಇವರುಗಳಿಗೆ.

*05.* ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಮತ್ತು ಮೈಸೂರು ವಿಭಾಗಗಳಲ್ಲಿನ ಎಲ್ಲಾ ಉಪ ನಿರ್ದೇಶಕರು [ಅಭಿವೃದ್ಧಿ], ಇವರುಗಳಿಗೆ.

*06.* ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಮತ್ತು ಮೈಸೂರು ವಿಭಾಗಗಳಲ್ಲಿನ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.

*07.* ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ.

*08.* ಕಛೇರಿ ಪ್ರತಿ.

ಪೂರ್ಣಿಮ. E:\ವರ್ಗಾವಣೆ ಸಂಬಂಧ ಸುತ್ತೋಲೆ.doc

## 2011–12ನೇ ಸಾಲಿಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಬೋಧಕೇತರ ಅಧಿಕಾರಿ/ಸಿಬ್ಬಂದಿ ವರ್ಗದವರ ವರ್ಗಾವಣೆ ಅರ್ಜಿ ನಮೂನೆ

| | | | | |
|---|---|---|---|---|
| 01. | ನೌಕರರ ಹೆಸರು | : | | |
| 02. | ಹುದ್ದೆಯ ಪದನಾಮ | : | | |
| 03. | ಜನ್ಮ ದಿನಾಂಕ | : | | |
| 04. | ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ, ತಾಲ್ಲೂಕು ಜಿಲ್ಲೆ [ಪೂರ್ಣ ವಿಳಾಸ] | : | | |
| 05. | ಸರ್ಕಾರಿ ಸೇವೆಗೆ ಸೇರಿದ ದಿನಾಂಕ | : | | |
| 06. | ಹಾಲಿ ಸ್ಥಳದಲ್ಲಿ ಯಾವ ದಿನಾಂಕದಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ. | : | | |
| 07. | ವರ್ಗಾವಣೆಗೆ ಕಾರಣ [ಸಂಬಂಧಿಸಿದಂತೆ ಅಗತ್ಯ ದಾಖಲೆ ಸಲ್ಲಿಸತಕ್ಕದ್ದು] | | 1 | ಪತಿ–ಪತ್ನಿ ಪ್ರಕರಣ |
| | | | 2 | ಪರಸ್ಪರ |
| | | | 3 | ವೈಧ್ಯಕೀಯ ಕಾರಣ |
| | | | 4 | ನಿವೃತ್ತಿ ಅಂಚು |
| | | | 5 | ವಿಧವಾ ಪ್ರಕರಣ |
| | | | 6 | ಅಂಗಲವಿಕಲ |
| | | | 8 | ಇತರೆ [ಸ್ಪಷ್ಟ ಪಡಿಸಬೇಕು] |
| 08. | ವರ್ಗಾವಣೆ ಬಯಸಿರುವ ಸ್ಥಳ | | 1 | |
| | | | 2 | |
| | | | 3 | |

ಸ್ಥಳ:

ದಿನಾಂಕ: ವರ್ಗಾವಣೆ ಬಯಸಿರುವ ಅಧಿಕಾರಿ/ನೌಕರರ ಸಹಿ

ವರ್ಗಾವಣೆ ಕೋರಿರುವ ಅಧಿಕಾರಿ/ನೌಕರರು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಕಛೇರಿ ಮುಖ್ಯಸ್ಥರ ಶಿಫಾರಸು:

ಅಧಿಕಾರಿಗಳ ಸಹಿ

[ಹೆಸರು ಮತ್ತು ಮೊಹರಿನೊಂದಿಗೆ]